RNU AIR DHARWAD

**DECEMBER 22, 2024**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ವಿಜಯಪುರದಲ್ಲಿ ಇದೀಗ, ವೃಕ್ಷಥಾನ್ ಹೆರಿಟೇಜ್ ರನ್‌ಗೆ ಚಾಲನೆ; ಸಾವಿರಾರು ಜನ ಓಟದಲ್ಲಿ ಭಾಗಿ.**
- **ರಾಜ್ಯದ ಗಣಿ ಬಾಧಿತ ಪ್ರದೇಶಗಳಲ್ಲಿ, ಪರಿಸರದ ಪುನರುಜ್ಜೀವನಕ್ಕೆ, ತಾಲೂಕಿಗೊಂದು ವೃಕ್ಷೋದ್ಯಾನ.**
- **ಹವಾಮಾನ ಕ್ರಿಯೆ ಮತ್ತು ಸ್ಥಿತಿ ಸ್ಥಾಪಕತ್ವ ಯೋಜನೆಯಲ್ಲಿ, ಸಾರ್ವಜನಿಕರ ಸಹಭಾಗಿತ್ವ ಅಗತ್ಯ – ಪ್ರೀತಿ ಗೆಹ್ಲೋಟ್.**
- **ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಇಂದು ಸಂಜೆ, ಸಾಹಿತಿ ಸಿ.ಪಿ. ಕೃಷ್ಣಕುಮಾರ, ಸಮಾರೋಪ ಭಾಷಣ.**

<><><>

**ಈಗ ವಾರ್ತೆಗಳ ವಿವರ**

<><><>

**ವಿಜಯಪುರದಲ್ಲಿ ಇಂದು, ವೃಕ್ಷಥಾನ್ ಹೆರಿಟೇಜ್ ರನ್ 'ಪಾರಂಪರಿಕ ಓಟ' ಆಯೋಜಿತವಾಗಿದೆ. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಈಗಷ್ಟೇ ಚಾಲನೆ ನೀಡಿದ್ದಾರೆ. 2017 ರಲ್ಲಿ ಆರಂಭವಾದ, ವೃಕ್ಷಥಾನ್ ಹೆರಿಟೇಜ್ ರನ್, 'ಪರಿಸರ ಪ್ರೇಮ ಸಾರುವ ಓಟದಲ್ಲಿ, ಒಟ್ಟಿಗೆ ಹೆಜ್ಜೆ ಹಾಕೋಣ' ಎಂದು ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ' ಎಂ.ಬಿ.ಪಾಟೀಲ, ಕೋರಿದ್ದಾರೆ. 5, 10, 21 ಕಿಲೋ ಮೀಟರ್ ವಿಭಾಗದ ಎಲ್ಲ ಓಟಗಳು, ಡಾಕ್ಟರ್ ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಿಂದ ಪ್ರಾರಂಭವಾಗಿ, ನಗರದ ನಾನಾ ಪ್ರಾಚೀನ ಸ್ಮಾರಕಗಳ ಮೂಲಕ ಸಂಚರಿಸಿ, ಪುನಃ ಕ್ರೀಡಾಂಗಣದಲ್ಲಿ ಮುಕ್ತಾಯಗೊಳ್ಳಲಿವೆ. 21 ಕಿಲೋ ಮೀಟರ್ ಓಟ ಬೆಳಗ್ಗೆ 6 ಗಂಟೆಗೆ, 10 ಕಿಲೋ ಮೀಟರ್ ಓಟಕ್ಕೆ ಬೆಳಗ್ಗೆ 6.45ಕ್ಕೆ ಚಾಲನೆ ನೀಡಲಾಗಿದೆ. 5 ಕಿಲೋ ಮೀಟರ್ ಓಟ ಈ ಬೆಳಗ್ಗೆ 7.30ಕ್ಕೆ ಆರಂಭಗೊಳ್ಳಲಿದೆ. 'ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ' ಧ್ಯೇಯದೊಂದಿಗೆ, 10 ಸಾವಿರಕ್ಕೂ ಅಧಿಕ ಜನ ಭಾಗವಹಿಸಿದ್ದಾರೆ.**

<><><>

**ರಾಜ್ಯದ ಗಣಿ ಬಾಧಿತ ಪ್ರದೇಶಗಳಲ್ಲಿ, ಪರಿಸರದ ಮೇಲಿನ ದು ್ಪರಿಣಾಮ ತಗ್ಗಿಸಲು, ತಾಲೂಕಿಗೊಂದು ವೃಕ್ಷೋದ್ಯಾನ ನಿರ್ಮಿಸಲು, ಕಾರ್ಯ ಯೋಜನೆ ರೂಪಿಸಲಾಗುವುದು ಎಂದು, ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.**

ಬಳ್ಳಾರಿಯ ಅರಣ್ಯ ಇಲಾಖೆ ಕಚೇರಿಯಲ್ಲಿ, ಅವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಕರ್ನಾಟಕ ಗಣಿ ಪರಿಸರ ಪುನರ್ ಸ್ಥಾಪನೆ ನಿಗಮದ ನಿಧಿ ಬಳಸಿಕೊಂಡು, ಜೀವವೈವಿಧ್ಯ ಮತ್ತು ಪರಿಸರದ ಮೇಲಾಗಿರುವ ಹಾನಿ ತಗ್ಗಿಸಲು, ಈ ಕ್ರಿಯಾ ಯೋಜನೆ ರೂಪಿಸುವಂತೆ, ಗಣಿ ಪ್ರದೇಶಗಳಲ್ಲಿ, ವನ್ಯಜೀವಿ ಸಂರಕ್ಷಣೆ ಯೋಜನೆಯನ್ನು ಸಮರ್ಪಕವಾಗಿ ಅನು ್ಠಾನಗೊಳಿಸುವಂತೆ ಅರಣ್ಯಾಧಿಕಾರಿಗಳಿಗೆ ಸೂಚಿಸಿದರು.

<><><>

ದಾವಣಗೆರೆ, ಕೊಪ್ಪಳ, ಬಳ್ಳಾರಿ, ವಿಜಯನಗರ ಹಾಗೂ ಚಿತ್ರದುರ್ಗ ವಿಭಾಗದಲ್ಲಿ ಸಸಿ ನೆಡಲು ಯೋಜಿಸುವಂತೆ, ಅಧಿಕಾರಿಗಳಿಗೆ ಸಚಿವ ಖಂಡ್ರೆ ನಿರ್ದೇಶಿಸಿದರು.

<><><>

ಬೆಂಗಳೂರಿನ, ಹವಾಮಾನ ಕ್ರಿಯೆ ಮತ್ತು ಸ್ಥಿತಿ ಸ್ಥಾಪಕತ್ವ ಯೋಜನೆಯನ್ನು ಮುನ್ನಡೆಸಲು, ಸಾರ್ವಜನಿಕರ ಸಹಭಾಗಿತ್ವ ಅಗತ್ಯ ಎಂದು, ಹವಾಮಾನ ವೈಪರಿತ್ಯ ನಿರ್ವಹಣೆಯ, ವಿಶೇ ' ಆಯುಕ್ತರು ಹಾಗೂ ಹವಾಮಾನ ಕ್ರಿಯಾ ಕೋಶದ ಮುಖ್ಯಸ್ಥೆ ಪ್ರೀತಿ ಗೆಹ್ಲೋಟ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿತ ಸಭೆಯಲ್ಲಿ ಮಾತನಾಡಿದ ಅವರು, ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ ಮತ್ತು ಹವಾಮಾನ ಕ್ರಿಯಾ ಕೋಶದ ಬಗ್ಗೆ ಜಾಗೃತಿ ಮೂಡಿಸುವುದು, ವಿವಿಧ ಪಾಲುದಾರರ ಸಹಯೋಗದೊಂದಿಗೆ ಹವಾಮಾನ ಕ್ರಿಯಾ ಕೋಶದ ಚಟುವಟಿಕೆಗಳನ್ನು ಹಂಚಿಕೊಳ್ಳುವುದು ಹಾಗೂ ಹವಾಮಾನ ಕ್ರಿಯೆಯ ಕೋಶದೊಂದಿಗೆ ಸಹಕರಿಸಲು ನಾಗರಿಕರನ್ನು ಪ್ರೋತ್ಸಾಹಿಸುವುದು ಉದ್ದೇಶವಾಗಿದೆ ಎಂದರು.

<><><>

ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ, ಜ್ಞಾನವನ್ನು ತಲುಪಿಸುವ ಆಶಯ, 'ಅರಿವು ಕೇಂದ್ರ'ದ್ದು ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಸಾಕ್ಷರತೆಯೊಂದಿಗೆ, ಡಿಜಿಟಲ್ ತಿಳಿವಳಿಕೆ ಮಹತ್ವ ಮನಗಂಡು, ಗ್ರಾಮೀಣ ಅರಿವು ಕೇಂದ್ರಗಳಲ್ಲಿ, ಡಿಜಿಟಲ್ ಸಾಕ್ಷರತೆ ಮೂಡಿಸಲು ಯೋಜಿಸಲಾಗಿದೆ.

<><><>

ದಾವಣಗೆರೆ ಜಿಲ್ಲೆ, ಚೆನ್ನಗಿರಿ ತಾಲೂಕು, ಹಿರೇಮಳಲಿ ಗ್ರಾಮ ಪಂಚಾಯಿತಿಯ ಅರಿವು ಕೇಂದ್ರದಲ್ಲಿ, ಅಲೆಮಾರಿ ಸಮುದಾಯದ ಹಕ್ಕಿಪಿಕ್ಕಿ ಜನಾಂಗದ ಮಹಿಳೆಯರಿಗೆ, ಸ್ಮಾರ್ಟ್ ಫೋನ್ ಬಳಕೆಯ ತರಬೇತಿ ಆಯೋಜಿಸಿ, ಆಧುನಿಕ ಸೌಲಭ್ಯಗಳ ಸದ್ಬಳಕೆಯ ಬಗ್ಗೆ, ತರಬೇತಿ ನೀಡಲಾಗಿದೆ. ಫಲಾನುಭವಿ ಅನಿಸಿಕೆ ಹೀಗಿದೆ..

<><><>

ಹಕ್ಕಿಪಿಕ್ಕಿ ಫಲಾನುಭವಿ ಧ್ವನಿ 26 ಸೆಕೆಂದುಗಳು

<><><>

ಈಗ ಜಾಹಿರಾತು..

ನಂತರ ಪ್ರದೇಶ ಸಮಾಚಾರ, ಮುಂದುವರೆಯುವುದು..

(ದಿನದರ್ಶಿಕೆ 10 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಸಿರಿಧಾನ್ಯ ನಡಿಗೆ, ಮಂಡ್ಯದಲ್ಲಿ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೆರಗು ಹೆಚ್ಚಿಸಿತು. ಕೃಷಿ ಇಲಾಖೆ ಆಯೋಜಿಸಿದ್ದ, ಸಿರಿಧಾನ್ಯ ನಡಿಗೆಗೆ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಸಿರಿಧಾನ್ಯ ಅತ್ಯಂತ ಆರೋಗ್ಯಯುತ ಆಹಾರವಾಗಿದ್ದು, ರಾಜ್ಯ ಸರ್ಕಾರ ಸಿರಿಧಾನ್ಯ ಬೆಳೆಗೆ, ವಿಶೇ ʼ ಪ್ರೋತ್ಸಾಹ ಧನ ನೀಡುತ್ತಿದೆ. ಬೆಂಗಳೂರಿನಲ್ಲಿ ಜನೆವರಿಯಲ್ಲಿ, ಸಿರಿಧಾನ್ಯ ಸಾವಯವ ಅಂತಾರಾಷ್ಟ್ರೀಯ ಮೇಳ ಆಯೋಜಿಸಲಾಗಿದೆ ಎಂದರು.

<><><>

ಮೂರು ದಿನಗಳ ಕಾಲ ನಡೆದ, ಕನ್ನಡ ನಾಡು-ನುಡಿಯ ಜಾತ್ರೆ, ಇಂದು ಸಂಜೆ ಸಮಾರೋಪಗೊಳ್ಳಲಿದೆ. ಸಂಜೆ 4.30ಕ್ಕೆ, ಪ್ರಧಾನ ವೇದಿಕೆಯಲ್ಲಿ ಹಿರಿಯ ಸಾಹಿತಿ, ಡಾಕ್ಟರ್ ಸಿ.ಪಿ. ಕೃಷ್ಣಕುಮಾರ ಸಮಾರೋಪ ನುಡಿಗಳನ್ನಾಡಲಿದ್ದಾರೆ. ಮುಖ್ಯಮಂತ್ರಿ ಸೇರಿದಂತೆ, ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಮಕ್ಕಳ ಸಾಹಿತ್ಯದಲ್ಲಿ ಹೊಸ ಮೌಲ್ಯಗಳು ಕುರಿತು, ತಮ್ಮ ವಿಚಾರ ಮಂಡಿಸಿದ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಹಿರಿಯ ಕತೆಗಾರ, ಬಸು ಬೇವಿನಗಿಡದ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಬಸು ಬೇವಿನಗಿಡದ ಧ್ವನಿ 60 ಸೆಕೆಂದುಗಳು

<><><>

ಬಳ್ಳಾರಿ ಜಿಲ್ಲೆ ಮೀನಹಳ್ಳಿಯ, ಗೃಹ ರಕ್ಷಕ ಮತ್ತು ಪೌರ ರಕ್ಷಣಾ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ, ಆಯೋಜಿತ 10 ದಿನಗಳ ಪುನರ್ ಮನನ ಶಿಬಿರದಲ್ಲಿ, ಧಾರವಾಡ ಜಿಲ್ಲಾ ಗೃಹ ರಕ್ಷಕ ದಳ, ಕಲಘಟಗಿ ಘಟಕದ ಕಲ್ಲಯ್ಯ ಹೆಬ್ಬಳ್ಳಿಮಠ, ಚಿನ್ನದ ಪದಕ ಗಳಿಸಿದ್ದಾರೆ. ಸಮಾದೇಷ್ಟರಾದ ಸುನೀಲ ಸರೂರ ಅಭಿನಂದಿಸಿದ್ದಾರೆ.

<><><>

ಮಹಾನ್ ಗಣಿತ ಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಅವರ, ಜನ್ಮ ದಿನವಾದ ಇಂದು, ಅವರ ಕೊಡುಗೆಗಳ ಸ್ಮರಣಾರ್ಥ, ರಾಷ್ಟ್ರೀಯ ಗಣಿತ ದಿನವನ್ನಾಗಿ ಆಚರಿಸಲಾಗುತ್ತದೆ. "ಗಣಿತ; ನಾವಿನ್ಯತೆ ಮತ್ತು ಪ್ರಗತಿಗೆ ಸೇತುವೆ" ಎಂಬ ಧ್ಯೇಯದೊಂದಿಗೆ, ವಿಜ್ಞಾನ, ತಂತ್ರಜ್ಞಾನ ಮತ್ತು ದೈನಂದಿನ ಜೀವನವನ್ನು ರೂಪಿಸುವಲ್ಲಿ, ಗಣಿತದ ಪಾತ್ರವನ್ನು ಶ್ರೀ ಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ, ಈ ದಿನವನ್ನು ಆಚರಿಸಲಾಗುತ್ತಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಶ್ರೀ ಮಾತೆ ಶಾರದಾ ದೇವಿಯವರ, ಜನ್ಮ ದಿನವಾದ ಇಂದು, ದಕ್ಷಿಣೇಶ್ವರದಲ್ಲಿರುವ ಶ್ರೀ ಶಾರದಾ ಮಠ ಮತ್ತು ರಾಮಕೃ ್ಣ ಶಾರದಾ ಮಿ ʼನ್ ಸೇರಿದಂತೆ, ವಿವಿಧೆಡೆ ವಿಶೇಷ ಕಾರ್ಯಕ್ರಮಗಳು, ಆಯೋಜಿತವಾಗಿವೆ.

<><><>

ಕಲಬುರಗಿಯಲ್ಲಿ ನೂತನವಾಗಿ ನಿರ್ಮಿತ, ಜಯದೇವ ಹೃದ್ರೋಗ ಚಿಕಿತ್ಸಾ ಆಸ್ಪತ್ರೆಯನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಮಧ್ಯಾಹ್ನ 12 ಗಂಟೆಗೆ, ಉದ್ಘಾಟಿಸಲಿದ್ದಾರೆ.

<><><>

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು, ವಿಜಯಪುರದ ಬಿ.ಎಲ್.ಡಿ.ಇ. ಪರಿಗಣಿತ ವಿಶ್ವವಿದ್ಯಾಲಯದ, 12ನೇ ಘಟಿಕೋತ್ಸವದಲ್ಲಿ ಭಾಗವಹಿಸಿದರು.

<><><>

ಜನ ಸಹಭಾಗಿತ್ವದ ಅರಣ್ಯ ಸಂರಕ್ಷಣಾ ಪದ್ಧತಿ ಹೊಂದಿ, 100 ವರ್ಷ ಪೂರೈಸಿರುವ, ಉತ್ತರಕನ್ನಡ ಜಿಲ್ಲೆ ಕುಮಟಾದ ಹಳಕಾರ ಗ್ರಾಮದಲ್ಲಿ, ಇಂದು ವಿಚಾರ ಸಂಕಿರಣ ಜರುಗಲಿದೆ.

<><><>

"ಜಾಗತಿಕ ಶಾಂತಿ ಮತ್ತು ಸಾಮರಸ್ಯಕ್ಕಾಗಿ ಧ್ಯಾನ" ಧ್ಯೇಯದೊಂದಿಗೆ, ವಿಶ್ವ ಧ್ಯಾನ ದಿನಾಚರಣೆಯನ್ನು, ನಿನ್ನೆ ವಿವಿಧೆಡೆ ಆಚರಿಸಿದ ವರದಿಗಳು ಬಂದಿವೆ.

<><><>

ರಾಯಚೂರು ವಿಶ್ವವಿದ್ಯಾಲಯ ಮತ್ತು ಪೂರ್ಣಿಮಾ ಆಯುರ್ವೇದ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆ ಸಹಯೋಗದಲ್ಲಿ, 'ದೇಶ್ ಕಿ ಪ್ರಕೃತಿ ಪರೀಕ್ಷಾ' ಅಭಿಯಾನ ಜರುಗಿತು.

<><><>

ರಾಜ್ಯದ ನಿವೃತ್ತ ಮುಖ್ಯ ಚುನಾವಣಾಧಿಕಾರಿ ಸಂಜೀವ ಕುಮಾರ, ಧಾರವಾಡ ಸರ್ಕಾರಿ ಕಲಾ ಮಂದಿರಕ್ಕೆ ಭೇಟಿ ನೀಡಿ, ಅಲ್ಲಿಯ ವಿಭಿನ್ನ ಕಲಾಕೃತಿಗಳನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

<><><>

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ, ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು, ಮಾನವ ಹಕ್ಕುಗಳ ಆಯೋಗಕ್ಕೆ ದೂರು ಸಲ್ಲಿಸುವುದಾಗಿ, ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ವಿಜಯಪುರದಲ್ಲಿ ಇದೀಗ, ವೃಕ್ಷಥಾನ್ ಹೆರಿಟೇಜ್ ರನ್‌ಗೆ ಚಾಲನೆ; ಸಾವಿರಾರು ಜನ ಓಟದಲ್ಲಿ ಭಾಗಿ.
- ರಾಜ್ಯದ ಗಣಿ ಬಾಧಿತ ಪ್ರದೇಶಗಳಲ್ಲಿ, ಪರಿಸರದ ಪುನರುಜ್ಜೀವನಕ್ಕೆ, ತಾಲೂಕಿಗೊಂದು ವೃಕ್ಷೋದ್ಯಾನ.
- ಹವಾಮಾನ ಕ್ರಿಯೆ ಮತ್ತು ಸ್ಥಿತಿ ಸ್ಥಾಪಕತ್ವ ಯೋಜನೆಯಲ್ಲಿ, ಸಾರ್ವಜನಿಕರ ಸಹಭಾಗಿತ್ವ ಅಗತ್ಯ – ಪ್ರೀತಿ ಗೆಹ್ಲೋಟ್.
- ಮಂಡ್ಯದ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ಇಂದು ಸಂಜೆ, ಸಾಹಿತಿ ಸಿ.ಪಿ. ಕೃಷ್ಣಕುಮಾರ, ಸಮಾರೋಪ ಭಾಷಣ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ